


ಭೀಮಾಬಾಯಿ ಮತ್ತು ಯಲ್ಲಮ್ಮ ಓದಿದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ

ದುಡಿದವರು. ಆ ಶಾಲೆಯನ್ನು ಈಗ 'ಕರ್ನಾಟಕ ಪಬ್ಲಿಕ್ ಸ್ಕೂಲ್' ಎಂದು ಕರೆಯುತ್ತಾರೆ.

ಅಂದಹಾಗೆ, ಇವರೊಡನೆ ಓದಿದ ಮತ್ತೊಬ್ಬ ವಲಸೆ ಬಂದ ಕಾರ್ಮಿಕರ ಮಗಳು ಶಿವನೀಲಮ್ಮ 89 ಪರ್ಸೆಂಟ್ ತೆಗೆದಿರುವ ಜಾಣೆ. ಆಕೆಯ ಕುಟುಂಬ, ಬಲು ಸಾಲವಾದಾಗ ಯಾದಗಿರಿಯಿಂದ ಬೆಂಗಳೂರಿಗೆ ವಲಸೆ ಬಂದಿತ್ತು. ಹೇಗೋ ಸಾಲ ತೀರಿ, ಇದೀಗ ಕುಟುಂಬ ಮತ್ತೆ ತಮ್ಮ ಜಮೀನಿನಲ್ಲಿ ಬೇಸಾಯ ಮಾಡಲು ಹಿಂತಿರುಗಿತ್ತು. ಶಿವನೀಲಮ್ಮ ಅಲ್ಲಿಯೇ ಪಿಯುಸಿಗೆ ಸೇರಿದ್ದಾಳೆ. ಬಡ ಜನರ ಬದುಕು ಅಲ್ಲಿಯೂ ಕಷ್ಟದ್ದು, ಇಲ್ಲಿಯೂ ಕಷ್ಟದ್ದೇ. 'ನ್ಯಾಷನಲ್ ಅಗ್ರಿ–ಫುಡ್ ಬಯೋಟೆಕ್ನಾಲಜಿ ಇನ್‌ಸ್ಟಿಟ್ಯೂಟ್'ನ ಅಂದಾಜಿನ ಪ್ರಕಾರ, ದಿನಕ್ಕೆ 4000ಕ್ಕೂ ಹೆಚ್ಚು ರೈತರು ಕಷ್ಟದಲ್ಲಿ ಸಿಲುಕಿ, ಬೇಸಾಯವನ್ನು ತೊರೆದು ಪಟ್ಟಣಗಳಿಗೆ ವಲಸೆ ಬರುತ್ತಿದ್ದಾರೆ.

## ಸರ್ಕಾರಿ ಶಾಲೆಯಲ್ಲಿ ಪವಾಡ

'ನಡೀ ಭೀಮಾಬಾಯಿ, ಶಾಲೆಗೆ ಹೋಗೋಣ. ನಿಮ್ಮ ಆ ಟೀಚರ್ ಜಮೀಲಾ ಅವರನ್ನು ನೋಡಬೇಕು' ಎಂದು ಮಕ್ಕಳೊಡನೆ ಹೊರಟೆ. ಅವರೊಡನೆ ಮುಖ್ಯ ಬೀದಿಗೆ ಬಂದು ಅರಳೀಕಟ್ಟೆ ಹತ್ತಿರ ಎಡಕ್ಕೆ ತಿರುಗಿ ಉದ್ದಕ್ಕೆ ನಡೆದಾಗ ಅಲ್ಲಿ ನಾಗನಹಳ್ಳಿಯ 'ನಮ್ಮೂರ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ' ಬೋರ್ಡ್ ಕಂಡಿತು.

ಜಮೀಲಾ ಮೇಡಂ ನಮ್ಮನ್ನು ನೋಡಿ ಖುಷಿಪಟ್ಟರು. ಅವರೊಡನೆ ಮಾತನಾಡಿದಂತೆ ಮನದುಂಬಿ ಬಂದಿತು. 'ಈ ಮಕ್ಕಳು ನಾನು ತಲೆ ಎತ್ತಿ ನೋಡುವಷ್ಟು ಎತ್ತರಕ್ಕೆ ಬೆಳೆಯುತ್ತಾರೆ' ಎಂದು ಅಭಿಮಾನದಿಂದ ಹೇಳಿದರು. ಚೌಡಮ್ಮ ಟೀಚರ್ ಕೂಡಾ ಅಲ್ಲಿದ್ದರು. ಭೀಮಾಬಾಯಿಯ ಆ ಕಡೆಯ ತಂಗಿ ಇದೇ ಶಾಲೆಯಲ್ಲಿ ಈಗ ಆರನೇ ತರಗತಿಯಲ್ಲಿದ್ದಾಳೆ. 'ಎಲ್ಲಿ ಆಕೇನೂ ಕರೆಸಿ, ನನಗೊಂದು ಫೋಟೊ ಬೇಕು' ನಾನು ಹೇಳಿದೆ. ಮಹಡಿಯ ತರಗತಿಯಿಂದ ಬುಡಬುಡನೆ ಇಳಿದು ಬಂದಳು ದುರ್ಗಮ್ಮ. ಈ ಗುರು–ಶಿಷ್ಯರ ಅವಿನಾಭಾವ ಸಂಬಂಧವನ್ನು ಸೆರೆ ಹಿಡಿದಂತೆ, ಸರ್ಕಾರಿ ಶಾಲೆಗಳಲ್ಲಿ ಇಂತಹ ಅದೆಷ್ಟು ಪವಾಡಗಳು ಸದ್ದಿಲ್ಲದೆ ನಡೆಯುತ್ತಿವೆ ಎಂದು ಅರಿವಿಗೆ ಬಂದಿತು.

ವಿಪರ್ಯಾಸ ನೋಡಿ, ಸರ್ಕಾರಿ ಶಾಲೆಗಳು ಈಗ ಮುಚ್ಚಿಹೋಗುತ್ತಿವೆ. 2018ರಲ್ಲಿಯೇ 'ಡೆಕ್ಕನ್ ಹೆರಾಲ್ಡ್' ದಿನಪತ್ರಿಕೆ, ನಾಲ್ಕು ವರ್ಷಗಳಲ್ಲಿ 38 ಸರ್ಕಾರಿ ಶಾಲೆಗಳು ಮುಚ್ಚಿ ಹೋಗಿರುವುದನ್ನು ವರದಿ ಮಾಡಿತ್ತು. ಒಂದೊಂದು ಸರ್ಕಾರಿ ಶಾಲೆ ಮುಚ್ಚಿದಾಗಲೂ, ಅಲ್ಲಿ ಭೀಮಾಬಾಯಿ, ಯಲ್ಲಮ್ಮನಂತಹ ಅವಕಾಶವಂಚಿತ ಮಕ್ಕಳಿಗೆ, ಬದುಕು–ಭವಿಷ್ಯದ ಬಾಗಿಲೇ ಮುಚ್ಚಿ ಹೋಗುತ್ತದೆ. ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳಬೇಕಿದೆ, ಅವುಗಳೊಡನೆ ಹೆಣ್ಣುಮಕ್ಕಳನ್ನೂ ಉಳಿಸಿಕೊಳ್ಳಬೇಕಿದೆ.

ಡಿಸೆಂಬರ್ 10, 2023ರ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ಮುಖಪುಟ ಲೇಖನ 'ವೆನ್ ವೂಂಬ್ ಟರ್ನ್ಸ್ ಗ್ರೇವ್' ಓದಿದಾಗ ಎದೆ ಭಾರವಾಗಿತ್ತು. ಇಂದೂ ಕೂಡ ಸಾವಿರಾರು ಹೆಣ್ಣು ಭ್ರೂಣಗಳು ಹತ್ಯೆಗೊಳಗಾಗುತ್ತಿವೆ. ಅತ್ಯಾಧುನಿಕ ತಂತ್ರಜ್ಞಾನವನ್ನು, ಭ್ರೂಣದ ಲಿಂಗ ಪತ್ತೆಗೆ, ತದನಂತರ ಭ್ರೂಣಹತ್ಯೆಗೆ ಬಳಸಲಾಗುತ್ತಿದೆ. ಇಂದಿಗೂ ಹೆಣ್ಣುಮಕ್ಕಳನ್ನು 'ಹೊರೆ' ಎಂದೇ ಭಾವಿಸುವ ಪುರುಷ ಪ್ರಧಾನ ಸಮಾಜಕ್ಕೆ, ಹೆಣ್ಣುಮಕ್ಕಳಿಂದಲೇ ಮನೆಗಳು ನಿಂತಿರುವುದು, ಹೆಣ್ಣು ಮನೆಯ ಒಳ–ಹೊರಗಿನ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ಹೊತ್ತಿರುವುದು ಕಾಣುವುದೇ ಇಲ್ಲ.

ವಿದ್ಯಾವಂತ ಕುಟುಂಬಗಳಲ್ಲೂ ಗಂಡು ಮಗುವಿನ ಮೋಹ ಹೋಗಿಲ್ಲ. ತಮ್ಮ ಪುಟ್ಟ ಹೆಗಲ ಮೇಲೆ ಮನೆಯ ಭಾರ ಹೊತ್ತು, ದುಡಿಯುತ್ತಾ ಓದುತ್ತಿರುವ ಭೀಮಾಬಾಯಿ, ಯಲ್ಲಮ್ಮನಂತಹ ಹೆಣ್ಣುಮಕ್ಕಳು, ನಮ್ಮ ಸಮಾಜದ ಕಣ್ಣು ತೆರೆಸಬೇಕಿದೆ.

ಪ್ರತಿಕ್ರಿಯಿಸಿ: feedback@sudha.co.in